ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ. ಧನಂಜಯ ಸರ್ಜಿ ಇವರು ಶೂನ್ಯ ವೇಳೆಯಲ್ಲಿ "ಟೈಮ್ಸ್ ಆಫ್ ಇಂಡಿಯಾ" ದಿನಪತ್ರಿಕೆಯಲ್ಲಿ ಪ್ರಕಟವಾದ "Dogbite **cases, rabies deaths see surge across Karnataka"** ಗಂಭೀರ ವಿಷಯವನ್ನು ವಸ್ತು ನಿಷ್ಠವಾಗಿ ಪ್ರಕಟಿಸಲಾಗಿದೆ.

**ರಾಜ್ಯದಲ್ಲಿ ಆರೋಗ್ಯ ಇಲಾಖೆಗೆ ತಲೆನೋವಾಗುವಷ್ಟು ನಾಯಿ ಕಡಿತ ಹಾಗೂ ರೇಬಿಸ್ ಪ್ರಕರಣಗಳು ವರದಿಯಾಗುತ್ತಿವೆ. ಕಳೆದ ವರ್ಷ 3,65,522 ನಾಯಿ ಕಡಿತ ಪ್ರಕರಣಗಳು ಹಾಗೂ 42 ಜನ ಮೃತಪಟ್ಟಿದ್ದು, ಈ ವರ್ಷದ ಜನವರಿಯಿಂದ ಇದುವರೆಗೆ 66,459 ನಾಯಿ ಕಡಿತ ಹಾಗೂ 8 ಮಂದಿ ಮೃತಪಟ್ಟಿರುವ ಪ್ರಕರಣ ನಮ್ಮ ರಾಜ್ಯದಲ್ಲಿ ನಡೆದಿರುವುದು ಆತಂಕ ಹಾಗೂ ಖೇದಕರ. ಕೋವಿಡ್ ನಂತರದ ವರ್ಷಗಳಲ್ಲಿ ನಾಯಿ ಕಡಿತ ಮತ್ತು ರೇಬಿಸ್ ಪ್ರಕರಣಗಳಲ್ಲಿ ಅತೀ ಹೆಚ್ಚಳ ಕಾಣುತ್ತಿದ್ದು, ಕಳೆದ ವರ್ಷಕ್ಕೆ ಹೊಲಿಸಿದಲ್ಲಿ ಶೇ. 47ರಷ್ಟು ಹೆಚ್ಚಳವಾಗಿದೆ. ಬೆಂಗಳೂರಿನಲ್ಲಿ 2,419 ನಾಯಿ ಕಡಿತ ಪ್ರಕರಣಗಳು ಹಾಗೂ 4 ರೇಬಿಸ್ ನಿಂದ ಮೃತಪಟ್ಟಿರುವುದಾಗಿ ವರದಿಯಾಗಿದೆ. ರಾಜ್ಯದ ರಾಜಧಾನಿಯಾಗಿ ಎಲ್ಲಾ ಸೌಲಭ್ಯ ಹಾಗೂ ತಿಳುವಳಿಕೆ ಇದ್ದಾಗ್ಯೂ, ಈ ಅಂಕಿ ಅಂಶಗಳು ಸರ್ಕಾರದ ನಿಷ್ಕ್ರಿಯತೆ ಹಾಗೂ ಕರ್ತವ್ಯ ವೈಫಲ್ಯವನ್ನು ಬೆತ್ತಿ ತೋರಿಸುತ್ತದೆ.**

**ಪತ್ರಿಕೆಯಲ್ಲಿ ವರದಿಯಾದಂತೆ ಸಂಪೂರ್ಣ ವ್ಯಾಕ್ಸಿನೇಷನ್ ಮಾಡದಿರುವುದು ಹಾಗೂ ನಾಯಿಗಳ ಸಂಖ್ಯೆ ನಿಯಂತ್ರಣ ಸೇರಿದಂತೆ ಹಲವು ನಿರ್ಲಕ್ಷ್ಯಗಳಿಂದ ರೇಬಿಸ್ ಮತ್ತು ನಾಯಿ ಕಡಿತದ ಕುರಿತು ತಿಳುವಳಿಕೆ ಕೊರತೆಯಿಂದಾಗಿ ಮಾರಣಾಂತಿಕವಾಗಲು ಕಾರಣವಾಗುತ್ತಿದೆ.**

**ಇದರೊಂದಿಗೆ, ಕಳೆದ ವರ್ಷ 13,235 ಹಾವು ಕಡಿತ ಪ್ರಕರಣಗಳು ಮತ್ತು 101 ಜನ ಹಾವು ಕಡಿತದಿಂದ ಮೃತಪಟ್ಟಿದ್ದು, ಈ ವರ್ಷದ ಆರಂಭದಿಂದ ಇಲ್ಲಿಯವರೆಗೆ 1,600 ಕ್ಕೂ ಹೆಚ್ಚು ಹಾವು-ಕಡಿತ ಪ್ರಕರಣ ಹಾಗೂ 12 ಜನ ಹಾವು ಕಡಿತದಿಂದ ಸಾವು ಸಂಭವಿಸಿರುವುದಾಗಿ ವರದಿಯಾಗಿದೆ. ಹಳ್ಳಿ ಪ್ರದೇಶಗಳಲ್ಲಿ ತಿಳುವಳಿಕೆ ಕೊರತೆಯಿಂದಾಗಿ ಮನೆ ಮದ್ದು, ನಾಟಿ ಔಷಧಿಗಳ ಮೊರೆ ಹೋಗುವುದರಿಂದ ವಿಷಪೂರಿತ ಹಾವು ಕಡಿತ ಪ್ರಕರಣಗಳಲ್ಲಿ ಸಾವು ಸಂಭವಿಸುತ್ತಿವೆ.**

**ಅಂಕಿ ಅಂಶಗಳು ಆತಂಕಕಾರಿಯಾಗಿವೆ. ಆರೋಗ್ಯ ಇಲಾಖೆಯು ಇತರೇ ಇಲಾಖೆಗಳೊಂದಿಗೆ ಹಾಗೂ ಸ್ಥಳೀಯಾಡಳಿತದ ಸಹಯೋಗದೊಂದಿಗೆ, ನಾಯಿ ಕಡಿತ, ರೇಬಿಸ್, ಬೀದಿ ನಾಯಿಗಳ ಸಂಖ್ಯೆಗಳನ್ನು ನಿಯಂತ್ರಿಸುವುದು, ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಆಂದೋಲನ ಮತ್ತು ಹಾವು ಕಡಿತದ ತಿಳುವಳಿಕೆಯನ್ನು ಸಾರ್ವಜನಿಕರಿಗೆ ನೀಡಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ಪ್ರಸ್ತಾಪಿಸಿರುವ ವಿಷಯಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-**

**ಹಾವು ಕಡಿತ ಪ್ರಕರಣಗಳ ವಿಷಯದ ಬಗ್ಗೆ:**

2024 ನೇ ಸಾಲಿನಲ್ಲಿ 13,235 ಹಾವು ಕಡಿತದ ಪ್ರಕರಣಗಳು ಹಾಗೂ 100 ಮರಣಗಳು IHIP (Integrated Health Information Platform) ತಂತ್ರಾಂಶದಲ್ಲಿ ವರದಿಯಾಗಿರುತ್ತವೆ ಹಾಗೂ 2025 ಜನವರಿ 01 ರಿಂದ 04.03.2025 ರ ತನಕ 1,650 ಹಾವು ಕಡಿತ ಪ್ರಕರಣಗಳು ಹಾಗೂ 10 ಮರಣಗಳು ವರದಿಯಾಗಿರುತ್ತದೆ.

ಮರಣಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ದಿನಾಂಕ 12.02.2024 ರಂದು ಕರ್ನಾಟಕ ಸಾಂಕ್ರಾಮಿಕ ರೋಗಗಳ ಖಾಯಿಲೆ 2020, ಸೆಕ್ಷನ್ 3 ರನ್ವಯ ಹಾವು ಕಡಿತ ಹಾಗೂ ಮರಣಗಳನ್ನು ಘೋಷಿತ ಖಾಯಿಲೆಯೆಂದು ಆದೇಶ ಹೊರಡಿಸಲಾಗಿದೆ. ಈ ಆದೇಶದಂತೆ ಎಲ್ಲಾ ಹಾವು ಕಡಿತ ಹಾಗೂ ಮರಣ ಪ್ರಕರಣಗಳನ್ನು ಖಾಸಗಿ ಆಸ್ಪತ್ರೆಗಳನ್ನೊಳಗೊಂಡಂತೆ ಎಲ್ಲಾ ಕೇಂದ್ರಗಳು ಕಡ್ಡಾಯವಾಗಿ ಭಾರತ ಸರ್ಕಾರದ IHIP (Integrated Health Information Platform) ಯಲ್ಲಿ ವರದಿ ಮಾಡಲು ಸೂಚಿಸಲಾಗಿದೆ. ಈ ಆದೇಶದಿಂದಾಗಿ ಹಿಂದಿನ ವರ್ಷಗಳಿಗೆ ಹೋಲಿಸಿದರೆ 2024-25 ವರ್ಷದಲ್ಲಿ ವರದಿಯಾಗಿರುವ ಪ್ರಕರಣಗಳ ಸಂಖ್ಯೆ ಹೆಚ್ಚಾಗಿರುತ್ತದೆ.
2. ಎಲ್ಲಾ ವೈದ್ಯಾಧಿಕಾರಿಗಳಿಗೆ ಹಾವು ಕಡಿತದ ಚಿಕಿತ್ಸೆ ಬಗ್ಗೆ ವಿಶೇಷ ತರಬೇತಿಯನ್ನು ನೀಡಲಾಗಿರುತ್ತದೆ.
3. ಹಾವು ಕಡಿತಕ್ಕೆ ನೀಡಲಾಗಿರುವ Anti Snake Venom (ASV) ಅನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ

(ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆ) ಉಚಿತವಾಗಿ ನೀಡಲಾಗುತ್ತಿದೆ ಹಾಗೂ ಎಲ್ಲಾ ಆಸ್ಪತ್ರೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ASV ಯನ್ನು ಇಟ್ಟುಕೊಳ್ಳಲು ಸೂಚಿಸಲಾಗಿದೆ.

4. ದಿನಾಂಕ 10.07.2024 ರಂದು ಅಂತರ್ ಇಲಾಖಾ ಕಾರ್ಯಾಗಾರವನ್ನು ನಡೆಸಿ, ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣದಲ್ಲಿ ತಮ್ಮ ತಮ್ಮ ಇಲಾಖೆಗಳ ಜವಾಬ್ದಾರಿಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ವಿವರಿಸಲಾಗಿದೆ.
5. ಹಾವು ಕಡಿತದ ಎಲ್ಲಾ ಮರಣಗಳನ್ನು ಕಡ್ಡಾಯವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ Death Audit ಮಾಡಿ ವರದಿ ನೀಡಲು ಸೂಚಿಸಲಾಗಿದೆ.
6. ರಾಜ್ಯದಿಂದ ನೀಡಿರುವ IEC Posters ಹಾಗೂ ವಿಡಿಯೋಗಳನ್ನು ಉಪಯೋಗಿಸಿ IEC ಚಟುವಟಿಕೆಗಳನ್ನು ನಡೆಸಿ, ಸಮುದಾಯದಲ್ಲಿ ಹಾವು ಕಡಿತದ ಬಗ್ಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಲು ಜಿಲ್ಲೆಗಳಿಗೆ ಸೂಚಿಸಲಾಗಿದೆ.
7. ಸ್ಥಳೀಯ ಮಟ್ಟದಲ್ಲಿ ಗ್ರಾಮ ಪಂಚಾಯಿತಿ, NGOಗಳು, ಸಾಂಪ್ರದಾಯಕ ನಾಟಿ ಚಿಕಿತ್ಸಕರು ಹಾಗೂ ಇತರೆ ಸ್ಥಳೀಯ ಮುಖಂಡರು ಒಳಗೊಂಡಂತೆ ಇತರೆ ಇಲಾಖೆಗಳ (ಅರಣ್ಯ ಇಲಾಖೆ, ಕೃಷಿ ಇಲಾಖೆ, ಪಶು ಸಂಗೋಪನಾ ಹಾಗೂ ಮೀನುಗಾರಿಕೆ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ, ಇತರೆ) ಸಹಯೋಗದೊಂದಿಗೆ IEC ಚಟುವಟಿಕೆಗಳನ್ನು ನಡೆಸಲು ಹಾಗೂ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರಿಗೆ ಸಮುದಾಯದಲ್ಲಿ ಹಾವು ಕಡಿತದ ಬಗ್ಗೆ ಅರಿವು ಮೂಡಿಸಲು ತಿಳಿಸಲಾಗಿದೆ.
8. ಸಾಂಪ್ರದಾಯಕ ನಾಟಿ ಚಿಕಿತ್ಸಕರಿಂದ ಹಾವು ಕಡಿತ ವ್ಯಕ್ತಿಯು ಆಸ್ಪತ್ರೆ ಸೇರುವುದು ತಡವಾದರೆ KPME Act ರ ಅನ್ವಯ ಅವರ ಮೇಲೆ ಕ್ರಮ ಜರುಗಿಸಲು ಜಿಲ್ಲೆಗಳಿಗೆ ತಿಳಿಸಲಾಗಿದೆ.
9. ಹಾವು ಕಡಿತ ಪ್ರಕರಣಗಳು ಯಾವ ಆಸ್ಪತ್ರೆಗೆ ಚಿಕಿತ್ಸೆಗೆ ಭೇಟಿ ನೀಡಬೇಕೆಂದು ಮ್ಯಾಪಿಂಗ್ ಮಾಡಲು ಹಾಗೂ ತಮ್ಮ ಕೇಂದ್ರದಲ್ಲಿ ಬರುವಂತಹ high risk area ಹಾಗೂ high risk population ಅನ್ನು ಗುರುತಿಸಿ, ಅಲ್ಲಿ ತೀವ್ರ ನಿಗಾವಹಿಸಲು ಮತ್ತು ಅಂತರ್ ಇಲಾಖಾ IEC ಚಟುವಟಿಕೆಗಳನ್ನು ನಡೆಸಲು ಸೂಚಿಸಲಾಗಿದೆ.

**ನಾಯಿ ಕಡಿತ ಪ್ರಕರಣಗಳ ವಿಷಯದ ಬಗ್ಗೆ:**

1. ನಾಯಿ ಕಡಿತ ಹಾಗೂ ರೇಬೀಸ್ ಖಾಯಿಲೆಯ ತಡೆಗಟ್ಟುವಿಕೆಗಾಗಿ ರಾಷ್ಟ್ರೀಯ ರೇಬೀಸ್ ನಿಯಂತ್ರಣ ಕಾರ್ಯಕ್ರಮ ಇಲಾಖೆಯಲ್ಲಿ ಅನುಷ್ಠಾನದಲ್ಲಿರುತ್ತದೆ. ಸದರಿ ಕಾರ್ಯಕ್ರಮದನ್ವಯ ರೇಬೀಸ್ ಖಾಯಿಲೆಯೂ ಒಂದು ಅಧಿಸೂಚಿತ ಖಾಯಿಲೆ ಎಂದು (Notifiable Disease) ಡಿಸೆಂಬರ್ 2022 ರಂದು ಸರ್ಕಾರದಿಂದ ಘೋಷಿಸಲಾಗಿದೆ.
2. ರಾಜ್ಯದಲ್ಲಿ ಕಳೆದ ವರ್ಷದಲ್ಲಿ (ಜನವರಿ ಇಂದ ಡಿಸೆಂಬರ್ 2024) ಆರೋಗ್ಯ ಇಲಾಖೆಯ ಅಂಕಿ ಅಂಶಗಳ ಅನ್ವಯ (IHIP Portal) ಒಟ್ಟು 3,61,522 ನಾಯಿ ಕಡಿತ ಪ್ರಕರಣಗಳು ಹಾಗೂ 42 ರೇಬೀಸ್ ಖಾಯಿಲೆಯಿಂದ ಮರಣಪಟ್ಟಿರುವ ಪ್ರಕರಣಗಳು ವರದಿಯಾಗಿರುತ್ತದೆ.
3. ನಾಯಿ ಕಡಿತಕ್ಕಾಗಿ Anti Rabies Vaccine ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ Rabies Immunoglobulin ಔಷಧಿಗಳನ್ನು ಎಲ್ಲಾ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರ ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲು ವ್ಯವಸ್ಥೆ ಮಾಡಲಾಗಿದೆ.
4. ವಿಶ್ವ ಆರೋಗ್ಯ ಸಂಸ್ಥೆಯ 'Zero by 30' ಅಂದರೆ 2030 ರ ವೇಳೆಗೆ ವಿಶ್ವದಾದ್ಯಂತ ರೇಬೀಸ್ ಖಾಯಿಲೆಯಿಂದಾಗುವ ಮರಣಗಳನ್ನು ಶೂನ್ಯಕ್ಕೆ ಇಳಿಸಲು ಇರುವ ಧ್ಯೆಯದನ್ವಯ ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯ ಸೂಚನೆಯಂತೆ, ರಾಜ್ಯದಲ್ಲಿ 'Joint Steering Committee for Dog mediated Rabies Elimination ಎಂಬ ಸಮಿತಿಯು ರಚನೆಗೊಂಡಿರುತ್ತದೆ.
5. ಇಲಾಖಾವತಿಯಿಂದ ನಾಯಿ ಕಡಿತ, ರೇಬೀಸ್ ಖಾಯಿಲೆಯ ತಡೆಗಟ್ಟುವಿಕೆ ಹಾಗೂ ಬೀದಿ ನಾಯಿಗಳ ಸಂಖ್ಯಾ ನಿಯಂತ್ರಣ ಹಾಗೂ ನಾಯಿಗಳಿಗೆ ರೇಬೀಸ್ ಚುಚ್ಚುಮದ್ದು ನೀಡುವಿಕೆಗೆ ಸಂಬಂಧಿಸಿದಂತೆ ಇತರ ಇಲಾಖೆಗಳೊಂದಿಗೆ ಅಂತರ್ ಇಲಾಖಾ ಸಮನ್ವಯ ಸಭೆಗಳನ್ನು ಆಯೋಜಿಸಲಾಗಿರುತ್ತದೆ.
6. ಇಲಾಖೆಯ ಎಲ್ಲಾ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ರಾಷ್ಟ್ರೀಯ ರೇಬೀಸ್ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ತರಬೇತಿಗಳನ್ನು ನೀಡಲಾಗಿರುತ್ತದೆ.
7. ನಾಯಿ ಕಡಿತ ಹಾಗೂ ರೇಬೀಸ್ ಖಾಯಿಲೆಗೆ ಸಂಬಂಧಪಟ್ಟಂತೆ ಕರ ಪತ್ರಗಳು ಹಾಗೂ ಪೋಸ್ಟರ್ ಗಳನ್ನು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಗ್ರಾಮ ಪಂಚಾಯಿತಿಗಳಿಗೆ ವಿತರಿಸಿ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

ಸಂಖ್ಯೆ: ಆಕುಕ 11 ಎಸ್ ಎಂ ಎಂ 2025.

(ದಿನೇಶ್ ಗುಂಡೂರಾವ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.